‘

ಕನ್ನಡದ ಬಹುಪಾಲು ನವ್ಯ ಸಾಹಿತಿಗಳು ಅಮೆರಿಕಾ ಪ್ರಣೀತ ವಿಚಾರಗಳಿಂದ ಅಗತ್ಯಕ್ಕಿಂತ ಹೆಚ್ಚಾಗಿ ಪ್ರಭಾವಿತರಾದರು. ಇದಕ್ಕೆ ಅವರು ಪರ್ಯಾಯ ಆರಿಸಿಕೊಂಡಿದ್ದು ಲೋಹಿಯಾವಾದ. ಆದರೆ, ಅಂಬೇಡ್ಕರ್‌ವಾದವನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವನ್ನು ಅವರು ಕಳೆದುಕೊಂಡರು. ಲೋಹಿಯಾರನ್ನು ಒಳಗೊಳ್ಳುತ್ತಲೇ, ಮಾರ್ಕ್ಸ್ ಮತ್ತು ಅಂಬೇಡ್ಕರ್ ಇಬ್ಬರನ್ನೂ ಹೊರಗಿಡುವ, ಗಾಂಧಿಯ ಬಗೆಗೂ ಅಷ್ಟಾಗಿ ಗಮನಕೊಡದ ಒಂದು ಮನಸ್ಥಿತಿ ಬೆಳೆಸಿಕೊಂಡರು.



ನಮ್ಮ ಸಮಯ ಮತ್ತು ಬೆಲೆಯನ್ನು ಆಪೋಶನ ತೆಗೆದುಕೊಂಡಿರುತ್ತದೆ. ನಾನು ಯಾವುದರ ಬಗ್ಗೆಯೂ ತಲೆ ಕೆಡಿಸಿಕೊಳ್ಳೋದಿಲ್ಲ, ಪ್ರಪಂಚದ ಶ್ರೇಷ್ಠ ಸಾಹಿತ್ಯವನ್ನು ಮಾತ್ರ ಓದಿಕೊಂಡು ವಿಮರ್ಶಿಸ್ತಾ ಇರ್ತೀನಿ ಅನ್ನೋದಿದೆಯಲ್ಲಾ, ಅದು ನನ್ನಂಥವನಿಗೆ ಕಷ್ಟ. ಅದೊಂದು ಆಯ್ಕೆ ಅಷ್ಟೆ. ವಿಮರ್ಶಕನ ಲೋಕದರ್ಶನ ಕಲಾದರ್ಶನ ಶ್ರೇಷ್ಠ ಕೃತಿಗಳ ವಿಮರ್ಶೆಯಲ್ಲಿ ಹೇಗೆ ಕಾಣುತ್ತದೋ ಅದೇ ರೀತಿ ಹೊಸ ಹುಡುಗ/ಹುಡುಗಿಯ ಕುರಿತು ಬರೆದ ವಿಮರ್ಶೆಯಲ್ಲೂ ಕಾಣುತ್ತೆ. ಹೊಸಬರ ಬಗ್ಗೆ ಬರೆಯುವಾಗ ಹಿಂಜರಿಕೆಯಿಂದ ಬರೀತೀನಿ ಅಂತಲ್ಲ. ಅಥವಾ ಅವರಿಗೆ ಗ್ರೇಸ್‌ಮಾರ್ಕ್ಸ್ ಕೊಟ್ಟು ಪಾಸು ಮಾಡ್ತೀನಿ ಅಂತಲೂ ಅಲ್ಲ.

ಈಗ ಗಿರಡ್ಡಿ ಗೋವಿಂದರಾಜ್ ಅವರ ವಿಮರ್ಶೆ ನೋಡಿ. ಯಾಕೆ ಅವರು ಒಂದು ಕಾಲಘಟ್ಟದಲ್ಲೇ ನಿಂತುಬಿಟ್ರು. ಅಲ್ಲಿಂದ ಆಚೆ ಯಾಕೆ ಹೊರಬರಲಿಲ್ಲ. ಮಹಿಳೆಯರ, ದಲಿತರ, ಹೊಸ ತಲೆಮಾರಿನ ಸಾಹಿತ್ಯದ ಬಗ್ಗೆ ಯಾಕೆ ಬರೀಲಿಲ್ಲ? ಅವರು ಬರೀಲೇಬೇಕಿತ್ತು ಅಂತನೂ ನಾನು ಕೇಳ್ತಿಲ್ಲ. ಆದ್ರೆ ನಮ್ಮ ಕಣ್ಣೆದುರು ಇಷ್ಟೆಲ್ಲಾ ಬದಲಾವಣೆಗಳು ಸಂಭವಿಸ್ತಾ ಇರುವಾಗ ಅದರ ಬಗ್ಗೆ ಮಾತಾಡಬೇಕು, ಬರೀಬೇಕು ಅಂತ ಯಾಕನ್ನಿಸೋದಿಲ್ಲ. ಅವರ ಕುರಿತು ನಾನು ಬರೆದ ಲೇಖನದಲ್ಲಿ ಇದನ್ನ ಪ್ರಸ್ತಾಪಿಸಿದ್ದೇನೆ. ಕುರ್ತಕೋಟಿ ಅವರು ತಮ್ಮ ವಿಮರ್ಶಾ ಪಾಂಡಿತ್ಯವನ್ನೆಲ್ಲಾ ಕೇವಲ ಬೇಂದ್ರೆ ಮತ್ತು ಕುಮಾರವ್ಯಾಸನ ಬಗ್ಗೆ ಯಾಕೆ ದುಡಿಸಿದ್ರು. ಅವರು ಮಹತ್ವದ್ದನ್ನೇ ಬರೆದಿದ್ದಾರೆ. ಬೇರೆಯವರ ಬಗ್ಗೇನೂ ಬರೆದಿರಬಹುದು, ಇಲ್ಲ ಅಂತಲ್ಲ. ಆದ್ರೆ ಆ ಕ್ಲಾಸಿಸಿಸ್ಟ್ ಮೈಂಡ್ ಒಳಗೆ ಉಳಿದ ಅನೇಕ ಮಹತ್ವದ ಲೇಖಕ-ಲೇಖಕಿಯರಿಗೆ ಯಾಕೆ ಪ್ರವೇಶ ಇರಲಿಲ್ಲ. ರಹಮತ್ ತರೀಕೆರೆ ಅವರು ಹೊಸ ತಲೆಮಾರಿನ ಬಗ್ಗೆ ಬರೆದ್ರು. ಪುಸ್ತಕ ರೂಪಿಸಿದ್ರು. ಅದು ಮಹತ್ವದ್ದು ಅಲ್ಲ ಅಂತ ಅನ್ನಲಿಕ್ಕಾಗುತ್ತದೆಯೆ? ಒಂದು ಲಿಟರರಿ ಕಲ್ಚರ್‌ನ ಹಲವು ಮುಖಗಳನ್ನು ಹಿಡಿಯುವುದು ಕೂಡ ಮುಖ್ಯ. ಹೀ ಸ್ಯಾಕ್ರಿಫೈಸ್ಡ್ ಹಿಜ್ ಟೈಮ್. ಹೀ ಫೆಲ್ಟ್. ಇದು ಕೂಡ ನನ್ನ ಜವಾಬ್ದಾರಿ ಅಂತ. ಸ್ವಾಮಿ (ಓ.ಎಲ್.ನಾಗಭೂಷಣಸ್ವಾಮಿ) ಎಷ್ಟು ಅನುವಾದ ಮಾಡಿದ್ದಾರಂದ್ರೆ ಸ್ವತಃ ಅವರೇ